- ನೀರಿನೊಂದಿಗೆ ಆಟವಾಡುತ್ತಿರುವ ಮುದ್ದು ಮಗುವಿನ ಚಿತ್ರ ಹೊದ್ದು ಕೈಸೇರಿದ ನವೆಂಬರ್ ಸಂಚಿಕೆ, ಅದರಲ್ಲಿನ 'ಹೊಸ ಮಕ್ಕಳಿಗೆ ಹಳೆಯ ಪದ್ಯ'ಗಳು ಮನ ಸೆಳೆದವು. ಸತ್ಯಾನಂದ ಪಾತ್ರೋಟ ಅವರ ಕವಿತೆ ಖುಷಿ ನೀಡಿತು. ಸಿ. ನಾಗಣ್ಣ ಅವರ 'ಅಳಬೇಡ ಕಂದ' (ಗೂಗಿ ವಾ ಥಿಯಾಂಗೊ ಅವರ Weep Not Child) ಪುಸ್ತಕವನ್ನು ಎಚ್. ದಂಡಪ್ಪ ಅವರು ಅರ್ಥಪೂರ್ಣವಾಗಿ ಪರಿಚಯಿಸಿದ್ದಾರೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಈ ಸಂಚಿಕೆಯ ಮುದ್ದಾದ ಪುಟಾಣಿಯ ಸುಮನೋಹರ ಮುಖಪುಟ ಮನಸೂರೆಗೊಂಡಿತು. 'ಹೊಸ ಮಕ್ಕಳಿಗೆ ಹಳೆಯ ಪದ್ಯ' ಉತ್ತಮ ಆಲೋಚನೆ. ಹಿರಿಯ ಕವಿಗಳ ಮಕ್ಕಳ ಪದ್ಯಗಳು ಮತ್ತು ಅವುಗಳ ವಿಶ್ಲೇಷಣೆಗಳು ತುಂಬಾ ಸೊಗಸಾಗಿ ಮೂಡಿಬಂದಿವೆ.

**ನಿರುಕ್ತಾ, ಬೆಂಗಳೂರು,**
**ಅನಸೂಯ ತ್ರಿವಿಕ್ರಮ್, ಕೇದಿಗೆಮನೆ,**
**ಶೇಖರಯ್ಯ ಟಿ.ಎಚ್., ಗೆದ್ದಲಗಟ್ಟೆ**

- ಕೇಶವರೆಡ್ಡಿ ಹಂದ್ರಾಳರ 'ಸೋನಾಗಾಚಿ' ಕತೆ ಸುಂದರ ನಿರೂಪಣೆಯಿಂದ ಮೆಚ್ಚುಗೆಯಾಯಿತು. ಅಲ್ಲಮ ಪ್ರಭು ಪಾತ್ರ ಮನೋಜ್ಞವಾಗಿತ್ತು.

**ಮೃತ್ಯುಂಜಯ ಹಿರೇಮಠ, ಹುಬ್ಬಳ್ಳಿ**

- 'ಕಥನ ಕಲೆಯೆಂಬ ಅಸಲಿ ಕಸುಬು' ಅಮೆರಿಕದ ಕತೆಗಾರ್ತಿ ಕ್ಯಾಥರಿನ್ ಆನ್ ಪೋರ್ಟರ್ ಸಂದರ್ಶನ (ಮೂಲ: ಬಾರ್ಬರಾ ಥಾಮ್ಸನ್, ಕನ್ನಡಕ್ಕೆ: ಹೇಮಾ ಎಸ್.) ಬಹಳವೇ ಇಷ್ಟವಾಯಿತು. 'ಕತೆಯನ್ನು ಕೊನೆಯ ಸಾಲಿನಿಂದ ಆರಂಭಿಸುತ್ತೇನೆ' ಎಂಬ ಕ್ಯಾಥರಿನ್ ಮಾತು ಸೋಜಿಗವೆನಿಸಿತು.

**ರಾಜೀವ್ ಎನ್. ಮಾಗಲ್, ಬೆಂಗಳೂರು**
**ಎಂ.ಜಿ. ರಂಗಸ್ವಾಮಿ, ಹಿರಿಯೂರು**




- ಜಯಂತ ಕಾಯ್ಕಿಣಿ ಅವರ 'ಮಿಸ್ ಕೋಡಂಗಿಯ ವ್ಯಾನಿಟಿ ಬ್ಯಾಗ್' ಛದ್ಮವೇಷದ ಎರಡು ಮುಖಗಳ ಬರಹ ವಿಶೇಷವಾಗಿತ್ತು.

**ನಗರ ಗುರುದೇವ್ ಭಂಡಾರ್ಕರ್, ಹೊಸನಗರ**

- ಪ್ರೇಮಕುಮಾರ್ ಹರಿಯಬ್ಬೆ ಅವರ 'ಬಂದು ಹೋದವನು' ಕತೆ ನಮ್ಮನ್ನು ಬೇರೆಯದೇ ಪ್ರಪಂಚಕ್ಕೆ ಎಳೆದೊಯ್ಯುತ್ತದೆ. ಮಕ್ಕಳ ಶಿಶುಪ್ರಾಸಗೀತೆಗಳು ಮತ್ತೆ ನಮ್ಮನ್ನು ಮಕ್ಕಳಾಗಿಸಿದವು.

**ಸಾವಿತ್ರಿ ಶ್ಯಾನುಭಾಗ್, ಕುಂದಾಪುರ**

**ಸ್ಪಷ್ಟನೆ**

- ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಗೆರೆ' ಹೆಸರಿನ ಕವಿತೆಯು ಸ್ಮಿತಾ ಅಮೃತರಾಜ್ ಅವರದ್ದು. ಆ ಪದ್ಯವನ್ನು ಪ್ರಮಾದವಶಾತ್ ನನ್ನ ಹೆಸರಿನಲ್ಲಿ 'ಮಯೂರ'ಕ್ಕೆ ಕಳಿಸಿ, ಪತ್ರಿಕೆ ಮತ್ತು ಮೂಲ ಕವಿಯ ವಿಶ್ವಾಸಾಘಾತ ಮಾಡಿದ್ದೇನೆ. ಈ ಪ್ರಮಾದಕ್ಕಾಗಿ ವಿಷಾದಿಸುತ್ತೇನೆ.

**ಡಿ.ಎಸ್. ರಾಮಸ್ವಾಮಿ, ಅರಸೀಕೆರೆ**